ಬಿಲ್ಲನ್ನು ತರುತ್ತೆವೆ. ಮುಂದೆ ಯಾವುದೇ ರೀತಿಯಿಂದ ನಮ್ಮ ರಾಜ್ಯದಲ್ಲಿ ಶಿಕ್ಷಕರ ವರ್ಗಾವಣೆ ಗೊಂದಲ ನಿವಾರಣೆಯಾಗುವುದಕ್ಕೆ ಅದೊಂದೇ ದಾರಿ ಇದೆ. ದಯಮಾಡಿ ಅದಕ್ಕೆ ಎಲ್ಲರೂ ಸಹಕಾರ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳು.

151 (843) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದ್ರಬಾದ್ ಕರ್ನಾಟಕ ಪ್ರದೇಶದಲ್ಲಿ ಯಾವ ಯಾವ ನೀರಾವರಿ ಯೋಜನೆಗಳು ಪ್ರಗತಿಯಲ್ಲಿವೆ ; ಈ ಯೋಜನೆಗಳು ಯಾವಾಗ ಪ್ರಾರಂಭಗೊಂಡವು ಮತ್ತು ಆಗ ಈ ಯೋಜನೆಗಳ ಅಂದಾಜು ವೆಚ್ಚ ಎಷ್ಟಿತ್ತು ಮತ್ತು ಈಗ ಈ ಯೋಜನೆಗಳಿಗೆ ವೆಚ್ಚ ಮಾಡಲಾಗಿರುವ ಹಣದ ಮೊತ್ತವೆಷ್ಟು ; ಪ್ರತಿ ನೀರಾವರಿ ಯೋಜನೆಗೆ ಎಷ್ಟೆಷ್ಟು ಹಣ ಹೆಚ್ಚಾಗಿ ವೆಚ್ಚವಾಗಿದೆ ; ಇದಕ್ಕೆ ಕಾರಣಗಳೇನು ;

ಆ) ಈ ನೀರಾವರಿ ಯೋಜನೆಗಳು ಪೂರ್ಣಗೊಳ್ಳಲು ಈಗಾಗಲೇ ವಿಳಂಬವಾಗಿದ್ದು, ಇವುಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿದೆಯೇ ; ಹಾಗಿದ್ದಲ್ಲಿ ಮೇಲ್ಕಂಡ ಪ್ರದೇಶದಲ್ಲಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳು ಯಾವಾಗ ಪೂರ್ಣಗೊಳ್ಳುವುದು; (ಪ್ರತಿಯೊಂದು ಯೋಜನೆಯ ಬಗ್ಗೆ ಪೂರ್ಣ ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು) ;

ಇ) ಯಾವ ಯಾವ ನೀರಾವರಿ ಯೋಜನೆಗಳ ಅನುಷ್ಠಾನದಲ್ಲಿ ಅವ್ಯವಹಾರಗಳು ಪತ್ತೆಯಾಗಿದೆ, ಇದರ ಮೇಲೆ ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ವಿವರಗಳನ್ನು ಒದಗಿಸುವುದು) ;

ಈ) ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಗೋದಾವರಿ ಜಲಾನಯನ ನಮ್ಮ ಪಾಲಿನ ನೀರನ್ನು ಪೂರ್ಣವಾಗಿ ಬಳಸಿಕೊಳ್ಳುವ ಯೋಜನೆ ಯಾವ ಹಂತದಲ್ಲಿದೆ ; ಪ್ರಸ್ತುತ ಸಾಲಿನಲ್ಲಿ ಇದಕ್ಕೆ ಮೀಸಲಾಗಿಟ್ಟಿರುವ ಹಣದ ಮೊತ್ತವೆಷ್ಟು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು:

(ಅ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಕೆಳಕಂಡ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಪ್ರಗತಿಯಲ್ಲಿರುತ್ತವೆ. ಈ ಯೋಜನೆಗಳು ಪ್ರಾರಂಭಗೊಂಡ ವರ್ಷ, ಯೋಜನೆಯ ಮೂಲ ಅಂದಾಜು ವೆಚ್ಚ, ಹಾಗೂ ಈ ಇಲ್ಲಿಯವರೆಗೆ ಆಗಿರುವ ವೆಚ್ಚದ ವಿವರ, ಮೂಲ ಅಂದಾಜಿಗಿಂತಲೂ ಹೆಚ್ಚಿಗೆ ಆದ ವೆಚ್ಚದ ವಿವರಗಳು ಅದಕ್ಕೆ ಮುಖ್ಯ ಕಾರಣಗಳು ಈ ಕೆಳಗಿನಂತಿವೆ

ಪ್ರಗತಿಯಲ್ಲಿರುವ ಯೋಜನೆಯ ಹೆಸರು	ಪ್ರಾರಂಭವಾದ ವರ್ಷ	ಮೂಲ ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಇಲ್ಲಿಯವರೆಗೆ ಆದ ವೆಚ್ಚ ರೂ. ಕೋಟಿ ಗಳಲ್ಲಿ	ಅಂದಾಜನ್ನು ಮೀರಿ ಹೆಚ್ಚಿಗೆ ಆದ ವೆಚ್ಚ ರೂ. ಕೋಟಿಗಳಲ್ಲಿ	ಅಂದಾಜಿಗಿಂತ ಇಲ್ಲಿಯವರೆಗೆ ಹೆಚ್ಚಾಗಿ ಆಗಿರುವ ವೆಚ್ಚಕ್ಕೆ ಮುಖ್ಯ ಕಾರಣಗಳು
ಬೀದರ್ ಜಿಲ್ಲೆ					
1. ಕಾರಂಜಾ	1970	258.17	440.40	182.23	1) ಪ್ರಾರಂಭದಿಂದಲೂ
2. ಮಾಂಜ್ರಾ ನದಿಗೆ ಅಡ್ಡಲಾಗಿ ನಾಲ್ಕು ಬ್ಯಾರೇಜುಗಳ ನಿರ್ಮಾಣ	2006	200.00	--	--	ಯೋಜನೆಗಳಿಗೆ ಸಾಕಷ್ಟು ಅನುದಾನ ಒದಗಿಸಲಾಗದೆ ವಿಳಂಬವಾದ ಕಾರಣ ಪ್ರತಿ ವರ್ಷ ದರಗಳ ಏರಿಕೆಯಿಂದ ವೆಚ್ಚ ಹೆಚ್ಚಾಗಿದೆ

ಪ್ರಗತಿಯಲ್ಲಿರುವ ಯೋಜನೆಯ ಹೆಸರು	ಪ್ರಾರಂಭವಾದ ವರ್ಷ	ಮೂಲ ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಇಲ್ಲಿಯವರೆಗೆ ಆದ ವೆಚ್ಚ ರೂ. ಕೋಟಿ ಗಳಲ್ಲಿ	ಅಂದಾಜನ್ನು ಮೀರಿ ಹೆಚ್ಚಿಗೆ ಆದ ವೆಚ್ಚ ರೂ. ಕೋಟಿಗಳಲ್ಲಿ	ಅಂದಾಜಿಗಿಂತ ಇಲ್ಲಿಯವರೆಗೆ ಹೆಚ್ಚಾಗಿ ಆಗಿರುವ ವೆಚ್ಚಕ್ಕೆ ಮುಖ್ಯ ಕಾರಣಗಳು
ಗುಲ್ಬರ್ಗಾ ಜಿಲ್ಲೆ					
1. ಅಮರ್ಜಾ	1973	5.70	109.95	104.25	2. ಭೂ ಸ್ವಾಧೀನದಲ್ಲಾದ
2. ಬೆಣ್ಣೆತೊರಾ	1973	82.50	284.46	201.96	ವಿಳಂಬದಿಂದ ಕಾಮಗಾರಿಯ
3. ಮುಲ್ಲಾಮಾರಿ ಕೆಳದಂಡೆ	1975	71.88	153.80	81.92	ಪ್ರಗತಿಯಲ್ಲಾದ ವಿಳಂಬದ ಕಾರಣ ದರಗಳ ಏರಿಕೆಯಿಂದ ವೆಚ್ಚ ಹೆಚ್ಚಾಗಿದೆ.
4. ಗಂಡೋರಿನಾಲಾ	1993	66.00	145.35	79.35	3. ಭೂಸ್ವಾಧೀನ ಪ್ರಕ್ರಿಯೆಯಲ್ಲಿ
5. ಭೀಮಾ ಏತ	1993	94.17	69.28	–	ಭೂಮಾಲೀಕರಿಂದ
6 ಸನ್ನತಿ ಬ್ಯಾರೇಜ್	2003	31.99	42.57	10.58	ನ್ಯಾಯಾಲಯದಲ್ಲಿ ಪ್ರಕರಣಗಳು
7. ಕೃಷ್ಣಾ ಮೇಲ್ದಂಡೆ ಯೋಜನೆ	1964	3573.83	8705.00	5131.17	ದಾಖಲಿಸಿದ್ದು, ಇದರಿಂದ ಕಾಮಗಾರಿಯಲ್ಲಿ ಆಗಿರುವ ವಿಳಂಬದಿಂದ ವೆಚ್ಚ ಹೆಚ್ಚಾಗಿದೆ.

ಪ್ರಗತಿಯಲ್ಲಿರುವ ಯೋಜನೆಯ ಹೆಸರು	ಪ್ರಾರಂಭವಾದ ವರ್ಷ	ಮೂಲ ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಇಲ್ಲಿಯವರೆಗೆ ಆದ ವೆಚ್ಚ ರೂ. ಕೋಟಿ ಗಳಲ್ಲಿ	ಅಂದಾಜನ್ನು ಮೀರಿ ಹೆಚ್ಚಿಗೆ ಆದ ವೆಚ್ಚ ರೂ. ಕೋಟಿಗಳಲ್ಲಿ	ಅಂದಾಜಿಗಿಂತ ಇಲ್ಲಿಯವರೆಗೆ ಹೆಚ್ಚಾಗಿ ಆಗಿರುವ ವೆಚ್ಚಕ್ಕೆ ಮುಖ್ಯ ಕಾರಣಗಳು
					4. ವಿನ್ಯಾಸದಲ್ಲಿ ಆದ ಬದಲಾವಣೆಯಿಂದ ಪ್ರಮಾಣವು ಹೆಚ್ಚಾದುದರಿಂದ ವಿಳಂಬವಾಗಿದೆ.
					5. ಈ ಯೋಜನೆಯ ವ್ಯಾಪ್ತಿಯಲ್ಲಿ (Scope of work) ಉಂಟಾದ ಮಾರ್ಪಾಡುಗಳಿಂದ ವೆಚ್ಚ ಹೆಚ್ಚಾಗಿದೆ.
ರಾಯಚೂರು ಜಿಲ್ಲೆ					
1. ಮಸ್ಕಿನಾಲಾ ಯೋಜನೆ	1976	3.11	45.12	42.01	

ಪ್ರಗತಿಯಲ್ಲಿರುವ ಯೋಜನೆಯ ಹೆಸರು	ಪ್ರಾರಂಭವಾದ ವರ್ಷ	ಮೂಲ ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಇಲ್ಲಿಯವರೆಗೆ ಆದ ವೆಚ್ಚ ರೂ. ಕೋಟಿಗಳಲ್ಲಿ	ಅಂದಾಜನ್ನು ಮೀರಿ ಹೆಚ್ಚಿಗೆ ಆದ ವೆಚ್ಚ ರೂ. ಕೋಟಿಗಳಲ್ಲಿ	ಅಂದಾಜಿಗಿಂತ ಇಲ್ಲಿಯವರೆಗೆ ಹೆಚ್ಚಾಗಿ ಆಗಿರುವ ವೆಚ್ಚಕ್ಕೆ ಮುಖ್ಯ ಕಾರಣಗಳು
ಬಳ್ಳಾರಿ ಜಿಲ್ಲೆ					
1. ಸಿಂಗಟಾಲೂರು ಏತ ನೀರಾವರಿ ಯೋಜನೆ	1997	63.62	85.37	21.75	
2. ವೈ-ಕಗ್ಗಲ್ ಏತ ನೀರಾವರಿ ಯೋಜನೆ	2004	13.00	0.91		
ಕೊಪ್ಪಳ ಜಿಲ್ಲೆ					
1. ಹಿರೇಹಳ್ಳ	1977	6.35	199.10	192.75	

ಆ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಹಾಕಿಕೊಂಡ ಕಾಲಮಿತಿಯನ್ನು ಈ ಕೆಳಗೆ ವಿವರಿಸಿರುವಂತೆ ನಿಗಧಿಪಡಿಸಲಾಗಿದೆ

ವರ್ಷ	ಪೂರ್ಣಗೊಳಿಸಲು ಉದ್ದೇಶಿಸಿರುವ ಯೋಜನೆಗಳು
2006–07	**ಬೀದರ್ ಜಿಲ್ಲೆ**
	1. ಕಾರಂಜಾ
	ಗುಲಬರ್ಗಾ ಜಿಲ್ಲೆ
	1. ಬೆಣ್ಣೆ ತೊರಾ
	2. ಗಂಡೋರಿ ನಾಲಾ
	3. ಮುಲ್ಲಾಮಾರಿ ಕೆಳದಂಡೆ
	4. ಕೃಷ್ಣಾ ಮೇಲ್ದಂಡೆ ಯೋಜನೆ
	ರಾಯಚೂರು ಜಿಲ್ಲೆ
	1. ಮಸ್ಕಿ ನಾಲಾ ಯೋಜನೆ
	ಕೊಪ್ಪಳ ಜಿಲ್ಲೆ
	1. ಹಿರೇಹಳ್ಳ
2007–08	**ಬೀದರ್ ಜಿಲ್ಲೆ:**
	ಮಾಂಜ್ರಾ ನದಿಗೆ ಅಡ್ಡಲಾಗಿ 4 ಬ್ಯಾರೇಜುಗಳ ನಿರ್ಮಾಣ

ವರ್ಷ	ಪೂರ್ಣಗೊಳಿಸಲು ಉದ್ದೇಶಿಸಿರುವ ಯೋಜನೆಗಳು
	ಗುಲ್ಬರ್ಗಾ ಜಿಲ್ಲೆ:
	1. ಅಮರ್ಜಾ
	2. ಸನ್ನತಿ ಬ್ಯಾರೇಜ್
	ಬಳ್ಳಾರಿ:
	1. ಸಿಂಗಟಾಲೂರು ಏತ ನೀರಾವರಿ ಯೋಜನೆ
	2. ವೈಕಗ್ಗಲ್ ಯೋಜನೆ
2008–09	**ಗುಲ್ಬರ್ಗಾ ಜಿಲ್ಲೆ:**
	ಭೀಮಾ ಏತ ನೀರಾವರಿ

ಇ) ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಈ) ಸಣ್ಣ ನೀರಾವರಿಯಡಿಯಲ್ಲಿ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಗೋದಾವರಿ ಕಣಿವೆಯ ಜಲಾನಯನ ಪ್ರದೇಶದಲ್ಲಿ ರಾಜ್ಯಕ್ಕೆ 2.5 ಟಿಎಂಸಿ ನೀರಿನ ಹಂಚಿಕೆಯಾಗಿದೆ. ಅದರಲ್ಲಿ ಇದುವರೆಗೆ 0.742 ಟಿಎಂಸಿ ಬಳಕೆಯಾಗುತ್ತಿರುವ ಮತ್ತು 1.758 ಟಿಎಂಸಿ ಬಳಕೆ ಮಾಡಬೇಕಾಗಿದೆ. ಹಂಚಿಕೆಯಾದ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಒಟ್ಟು 43 ಕಾಮಗಾರಿಯನ್ನು ಪ್ರಸ್ತಾಪಿಸಲಾಗಿದೆ. ಇವುಗಳನ್ನು ಅನುದಾನದ ಲಭ್ಯತೆ ಮೇಲೆ ಕೈಗೊಳ್ಳಲಾಗುವುದು ಈಗ ನಬಾರ್ಡ್ ಸಂಸ್ಥೆಯಿಂದ ಸಾಲ ಮಂಜೂರಾತಿ ಪಡೆದಿರುವ ಈ ಕೆಳಗಿನ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಕ್ರ. ಸಂ.	ಕಾಮಗಾರಿಗಳು	ರೂ. ಲಕ್ಷಗಳಲ್ಲಿ	ಹಂತ
1.	ಬೇಂದ್ರಾ ಕೆರೆ	60.00	ಕಾಮಗಾರಿ ಪ್ರಗತಿಯಲ್ಲಿದೆ
2.	ಅಕನಾಪುರ ಕೆರೆ	128.00	ಟೆಂಡರ್ ಕರೆಯಲಾಗಿದೆ
3.	ಕೌಡಗಾಂವ ಕೆರೆ	143.50	ಟೆಂಡರ್ ಕೆರೆಯಲಾಗಿದೆ
4.	ನಾಗಮಾರಪಳ್ಳಿ ಕೆರೆ	78.00	ಕಾಮಗಾರಿ ಪ್ರಗತಿಯಲ್ಲಿದೆ
5.	ಬಾಳೂರೆ ಬಿ.ಸಿ.ಬಿ.	160.00	ಗುತ್ತಿಗೆಗೆ ವಹಿಸಿಕೊಡಲಾಗಿದೆ
	ಒಟ್ಟು	**569.50**	

ಅನುಬಂಧ–1

ಕ್ರ. ಸಂ.	ಯೋಜನೆಯ ಹೆಸರು / ಅವ್ಯವಹಾರದ ಸಂಕ್ಷಿಪ್ತ ವಿವರ	ಗುರುತಿಸಲಾದ ಅಧಿಕಾರಿಗಳ ಸಂಖ್ಯೆ	ವಿಚಾರಣೆಯ ಹಂತ / ಸಿವಿಲ್ ಸೂಟ್
	ಕಾರಂಜಾ ಯೋಜನೆ		
1.	ಕಾರಂಜಾ ಯೋಜನೆಯಲ್ಲಿ ಒಂದು ಕೋಟಿ ಬೋಗಸ್ ಬಿಲ್ಲು ತಯಾರಿಸಿ ಅವ್ಯವಹಾರ ನಡೆಸಿದ ಬಗ್ಗೆ	1	ವಿಚಾರಣೆ ಪ್ರಗತಿಯಲ್ಲಿದೆ
2.	ಕಾರಂಜಾ ಯೋಜನೆಯ ಕಾಮಗಾರಿಗಳಲ್ಲಿ ನಡೆದ ಅವ್ಯವಹಾರದ ಬಗ್ಗೆ	8	ವಿಚಾರಣೆ ಪ್ರಗತಿಯಲ್ಲಿದೆ
3.	ಕಾರಂಜಾ ಯೋಜನೆ ವಿಭಾಗ ನಂ. 1 ಬೀದರ್‌ನಲ್ಲಿ ಕಾಮಗಾರಿಗಳಲ್ಲಿ ನಡೆದ ಭ್ರಷ್ಟಾಚಾರ	1	ವಿಚಾರಣೆ ಪ್ರಗತಿಯಲ್ಲಿದೆ

ಕ್ರ ಸಂ.	ಯೋಜನೆಯ ಹೆಸರು / ಅವ್ಯವಹಾರದ ಸಂಕ್ಷಿಪ್ತ ವಿವರ	ಗುರುತಿಸಲಾದ ಅಧಿಕಾರಿಗಳ ಸಂಖ್ಯೆ	ವಿಚಾರಣೆಯ ಹಂತ / ಸಿವಿಲ್ ಸೂಟ್
4.	ಕಾರಂಜಾ ಯೋಜನೆಯ ಕೆಪಿಸಿ ಉಪ ವಿಭಾಗಗಳು, ಭಾಲ್ಕಿ, ಹಾಲಹಳ್ಳಿ, ನಿಟ್ಟೂರು, ಡೊಲಗಾನಪುರ, ಭಾತಾಂಬ್ರ ಈ ಕಛೇರಿಗಳಲ್ಲಿ ನಡೆದ ಅವ್ಯವಹಾರ	18	ವಿಚಾರಣೆ ಪ್ರಗತಿಯಲ್ಲಿದೆ
5.	ಕಾರಂಜಾ ಯೋಜನೆಯಲ್ಲಿ ಮೆಟಿರಿಯಲ್ ಆಫ್ ಸೈಟ್ ಅಕೌಂಟ್‌ನಲ್ಲಿ ನಡೆದ ಅವ್ಯವಹಾರದ ಬಗ್ಗೆ	20	ವಿಚಾರಣೆ ಪ್ರಗತಿಯಲ್ಲಿದೆ
6.	ಕೆಪಿಸಿ ವಿಭಾಗ ನಂ. 1, ಬೀದರ್ ಇಲ್ಲಿ ಕಾಮಗಾರಿಗಳಲ್ಲಿ ನಡೆದ ಅವ್ಯವಹಾರಗಳು	8	ವಿಚಾರಣೆ ಪ್ರಗತಿಯಲ್ಲಿದೆ

ಕ್ರ ಸಂ.	ಯೋಜನೆಯ ಹೆಸರು / ಅವ್ಯವಹಾರದ ಸಂಕ್ಷಿಪ್ತ ವಿವರ	ಗುರುತಿಸಲಾದ ಅಧಿಕಾರಿಗಳ ಸಂಖ್ಯೆ	ವಿಚಾರಣೆಯ ಹಂತ / ಸಿವಿಲ್ ಸೂಟ್
7.	ಕಾರಂಜಾ ಯೋಜನೆ, ಭಾಲ್ಕಿ ಉಗ್ರಾಣ ಸಾಮಗ್ರಿಗಳ ಖರೀದಿಯಲ್ಲಿ ನಡೆದ ಅವ್ಯವಹಾರ	2	ವಿಚಾರಣೆ ಪ್ರಗತಿಯಲ್ಲಿದೆ
8.	ಕಾರಂಜಾ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಯಲ್ಲಿ ನಡೆದ ಅವ್ಯವಹಾರ ಹಾಗೂ ಆರ್ಥಿಕ ನಷ್ಟ	2	ವಿಚಾರಣೆ ಪ್ರಗತಿಯಲ್ಲಿದೆ
9.	ಕಾರಂಜಾ ಯೋಜನಾ ನಿರ್ಮಾಣ ವಿಭಾಗ ನಂ. 1 ಬೀದರ್ ಮ್ಯಾಜಸ್ಟೈನ್ ಕಟ್ಟಡದ ಸ್ಪೋಟಕ ವಸ್ತುಗಳ ಕಳವು	9	ವಿಚಾರಣೆ ಪ್ರಗತಿಯಲ್ಲಿದೆ

ಅಮರ್ಜಾ ಯೋಜನೆ

10.	ಅಮರ್ಜಾ ಯೋಜನೆಯಲ್ಲಿ ಶಹಬಾದ ಚಪ್ಪಡಿಗಳ ಕಳವು ಬಗ್ಗೆ	12	1) 10 ನಿವೃತ್ತ ಅಧಿಕಾರಿಗಳ ಮೇಲೆ ಸಿವಿಲ್ ದಾವೆ ಹೂಡಿದೆ 2) ಇಬ್ಬರು ಸೇವೆಯಲ್ಲಿದ್ದು ವಿಚಾರಣೆ ನಡೆಯುತ್ತಿದೆ
11.	ಅಮರ್ಜಾ ಯೋಜನಾ, ಗುಲ್ಬರ್ಗಾ ವ್ಯಾಪ್ತಿಯಲ್ಲಿ ಬರುವ ಅಮರ್ಜಾ ಡೆಸೆಂಬರ್ 2001 ರಿಂದ 2002 ರವರೆಗಿನ ಅವಧಿಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ	10	ವಿಚಾರಣೆ ನಡೆಯುತ್ತಿದೆ

ಬೆಣ್ಣೆತೋರಾ ಯೋಜನೆ

12.	ಬೆಣ್ಣೆತೋರಾ ಯೋಜನೆ ಹೆಬ್ಬಾಳ ವಿಭಾಗದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಾಮಗ್ರಿ ಖರೀದಿಸಿ ತುಂಡು ಕಾಮಗಾರಿ ನಡೆಸಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ	14	4 ನಿವೃತ್ತ ಅಧಿಕಾರಿಗಳ ಮೇಲೆ ಸಿವಿಲ್ ದಾವೆ ಹೂಡಲು ಕ್ರಮ ಕೈಗೊಂಡಿದೆ.

			10 ಅಧಿಕಾರಿ / ನೌಕರರ ಸೇವೆಯನ್ನು ಅಮಾನತ್ತಿನಲ್ಲಿಟ್ಟು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣ ಪಟ್ಟಿ ಜಾರಿ ಮಾಡಿದೆ
13.	ಬೆಣ್ಣೆತೋರಾ ಯೋಜನೆ ಗುಲ್ಬರ್ಗಾ ವಿಭಾಗದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಾಮಗ್ರಿ ಖರೀದಿಸಿ ತುಂಡು ಕಾಮಗಾರಿ ನಡೆಸಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ	13	8 ನಿವೃತ್ತ ಅಧಿಕಾರಿಗಳ ಮೇಲೆ ಸಿವಿಲ್ ದಾವೆ ಹೂಡಲು ಕ್ರಮ ಕೈಗೊಂಡಿದೆ 5 ಅಧಿಕಾರಿ / ನೌಕರರ ಸೇವೆಯನ್ನು ಅಮಾನತ್ತಿನಲ್ಲಿಟ್ಟು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣ ಪಟ್ಟಿ ಜಾರಿ ಮಾಡಿದೆ
14.	ಬೆಣ್ಣೆತೋರಾ ಯೋಜನೆಯಲ್ಲಿ ವಿವಿಧ ಕಾಮಗಾರಿಗಳಲ್ಲಿ ಅವ್ಯವಹಾರ ನಡೆಸಿ ಆರ್ಥಿಕ ನಷ್ಟ ಉಂಟು ಮಾಡಿದ ಬಗ್ಗೆ	7	6 ಅಧಿಕಾರಿ / ನೌಕರರ ಸೇವೆಯನ್ನು ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆ ನಡೆಯುತ್ತಿದೆ

15.	ಬೆಣ್ಣೆತೋರಾ ಯೋಜನೆಯಲ್ಲಿ ಹಣ ಭರವಸೆ ಪತ್ರದಲ್ಲಿನ ನಿಯಮ ಉಲ್ಲಂಘಿಸಿ ಹಣ ವಿತರಣೆ ಮಾಡಿರುವ ಬಗ್ಗೆ	1	ವಿಚಾರಣಾ ವರದಿ ಬಂದಿದೆ
16.	ಬೆಣ್ಣೆತೋರಾ ಯೋಜನೆ ವಿಭಾಗ ನಂ. 1, ಗುಲ್ಬರ್ಗಾ ಇಲ್ಲಿ ಹಣ ಭರವಸೆ ಪತ್ರದಂತೆ ಹಣ ಪಾವತಿಸುವಲ್ಲಿ ಅವ್ಯವಹಾರ ನಡೆಸಿರುವ ಬಗ್ಗೆ	2	ವಿಚಾರಣೆ ನಡೆಯುತ್ತಿದೆ
	ಕೃಷ್ಣಾ ಮೇಲ್ದಂಡೆ ಯೋಜನೆ		
17.	ಅಚ್ಚುಕಟ್ಟು ರಸ್ತೆ ವಿಭಾಗ ಸಂಖ್ಯೆ:3 ಕೃಷ್ಣಾಪುರ ಕಚೇರಿಯಲ್ಲಿ ನಡೆದ ಅವ್ಯವಹಾರದ ಬಗ್ಗೆ	1	ದೋಷಾರೋಪಣ ಪಟ್ಟಿ ಜಾರಿ ಮಾಡಿದೆ
18.	ಆರ್.ಎಫ್.ಎ. 514/92 ಡಿಸಿ–ಗುಲ್ಬರ್ಗಾ– ಇವರಿಗೆ ಹಣ ಪಾವತಿಸಿದ ಬಗ್ಗೆ.	7	ದೋಷಾರೋಪಣ ಪಟ್ಟಿ ಜಾರಿ ಮಾಡಿದೆ
19.	ಎನ್ಎಲ್ಬಿಸಿ ಹುಣಸಗಿ ಕಾಮಗಾರಿಯ ಸರ್ವೀಸ್ ರೋಡ್ ಮತ್ತು ಚೈನೇಜ್‌ಗಳಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ	2	ವಿಚಾರಣೆ ನಡೆಯುತ್ತಿದೆ

20.	ಕೃಷ್ಣಾ ಮೇಲ್ದಂಡೆ ಯೋಜನೆ, ಹುಣಸಗಿ ಕ್ಯಾಂಪ್‌ನಲ್ಲಿ ನೌಕರರಿಗೆ ವಸತಿಗೃಹ ಹಂಚಿಕೆಯಲ್ಲಿ ತಾರತಮ್ಯದ ಬಗ್ಗೆ	2	ವಿಚಾರಣೆ ನಡೆಯುತ್ತಿದೆ
21.	ಹುಣಸಗಿ ಕಾಲುವೆ ಕಾಮಗಾರಿಗಳಲ್ಲಿ ಸರ್ಕಾರಕ್ಕೆ ಆಗಿರುವ ನಷ್ಟ	5	ವಿಚಾರಣೆ ನಡೆಯುತ್ತಿದೆ
22.	ದಾತಾರ ಸಮಿತಿಯ ವರದಿ– ಶಾ:ಅಪುರ ಶಾಖಾ ಕಾಲುವೆ ಉಪ ವಿಭಾಗದ ಉಗ್ರಾಣದಲ್ಲಿ ಎಂ.ಎಸ್. ಗೇಟುಗಳಲ್ಲಿ ನಡೆದ ಅವ್ಯವಹಾರದ ಬಗ್ಗೆ	4	3 ನಿವೃತ್ತ ಅಧಿಕಾರಿಗಳ ಮೇಲೆ ಸಿವಿಲ್ ದಾವೆ ಹೂಡಿದೆ. 1 ಅಧಿಕಾರಿಯ ಮೇಲೆ ವಿಚಾರಣೆ ನಡೆಯುತ್ತಿದೆ.
23.	ನಾರಾಯಣಪುರ ಎಡದಂಡೆ ಕಾಲುವೆ ಕಿ.ಮೀ. 13.25 ರಲ್ಲಿ ಮುಖ್ಯ ಕಾಲುವೆಯ ನೀರು ನಿಯಂತ್ರಕ ಕಬ್ಬಿಣದ ಬಾಗಿಲು ಕೂಡಿಸಲು ವಿಳಂಬ ಮಾಡಿ ಆರ್ಥಿಕ ನಷ್ಟ ಮಾಡಿರುವ ಬಗ್ಗೆ	4	3 ನಿವೃತ್ತ ಅಧಿಕಾರಿಗಳ ಮೇಲೆ ಸಿವಿಲ್ ದಾವೆ ಹೂಡಿದೆ 1 ಅಧಿಕಾರಿಯ ಮೇಲೆ ವಿಚಾರಣೆ ನಡೆಯುತ್ತಿದೆ.

24.	ದಾತಾರ ಸಮಿತಿ ವರದಿ ಅನುಷ್ಟಾನ–ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ ಇಲ್ಲಿನ ಕಾಮಗಾರಿಗಳಲ್ಲಿ ನಡೆದ ಅವ್ಯವಹಾರದ ಬಗ್ಗೆ	3	ವಿಚಾರಣೆ ನಡೆಯುತ್ತಿದೆ
25.	ಎಸ್‌ಬಿಸಿ ಡಿಸ್ಟ್ರಿಬ್ಯೂಟರಿ ನಂ. 8 ನಿರ್ವಹಣಾ ಕಾಮಗಾರಿಯಲ್ಲಿ ಲೋಪದೋಷಗಳು	3	ದೋಷಾರೋಪಣ ಪಟ್ಟಿ ಜಾರಿ ಮಾಡಿದೆ
26.	ನಾರಾಯಣಪುರ ಎಡದಂಡೆ ನಾಲೆಯ ವಿತರಣಾ ನಾಲೆ ಸಂಖ್ಯೆ: 7 ರಲ್ಲಿ ಕಿ.ಮೀ. 0.00 ರಿಂದ 16.00 ರವರೆಗೆ ಕಳಪೆ ಕಾಮಗಾರಿ ಬಗ್ಗೆ (ಜಸಂಇ 344 ಸೇಇವಿ 2004)	3	ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳನ್ನು ನೇಮಿಸಲಾಗುತ್ತಿದೆ

27.	ಮುಳವಾಡ ಏತ ನೀರಾವರಿ ಲೀಗ್ ಆಫ್ ಕಾಲುವೆ ಕಿ.ಮೀ. 0.00 ರಿಂದ 4.00 ಕಿ.ಮೀ. ವರೆಗೆ ಹೆಚ್ಚುವರಿ ಕಾಮಗಾರಿಗಳನ್ನು ನಿರ್ಮಾಣ ಮಾಡಿರುವ ಬಗ್ಗೆ (ಜಸಂಇ 389 ಸೇಇವಿ 2004)	11	ವಿಚಾರಣೆ ನಡೆಸಲು ವಿಚಾರಣಾಧಿಕಾರಿಗನ್ನು ನೇಮಿಸಲಾಗುತ್ತಿದೆ.
28.	ಸಣ್ಣ ನೀರಾವರಿಯಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಆರು ಪ್ರಕರಣಗಳು	–	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಯಾವ್ಯಾವ ಯೋಜನೆಗಳು ಯಾವ್ಯಾವ ಹಂತದಲ್ಲಿವೆ ಎಂದು ಕೇಳಿದಾಗ, ಕಾರಂಜವನ್ನು ಹೇಳಿದ್ದಾರೆ. ಇದು 1970 ಪ್ರಾರಂಭವಾಗಿದ್ದು 258.17 ಕೋಟಿ ಇದ್ದದನ್ನು 440.40 ಕೋಟಿಯಾಗಿದೆ. ಇನ್ನು 182 ಕೋಟಿ ಬೇಕು ಎಂದು ಹೇಳುತ್ತಾರೆ. ಸುಮಾರು ಲೆಕ್ಕ ಮಾಡಿ ನೋಡಿದರೆ 622 ಕೋಟಿ ಖರ್ಚಾಗಿದೆ. ಇನ್ನು ಯಾವಾಗ ಇದು ಪೂರ್ಣವಾಗುತ್ತದೆ? ಯಾವಾಗ ಪೂರ್ಣ ಮಾಡುತ್ತೀರಿ ಎಂಬ ಬಗ್ಗೆ ನಿಶ್ಚಿತವಾದ ದಿನಾಂಕವನ್ನು ತಾವು ಹೇಳಬೇಕು. ಇದನ್ನು ಬಹಳ ದಿವಸ ತಡ ಮಾಡಿದರೆ ಕಾಸ್ಟ್ ಎಸ್ಕಲೇಷನ್ ಆಗುತ್ತದೆ. ಈಗ ಎಲ್ಲವೂ ಕಂಪ್ಲೀಟ್ ಆಗುವುದಕ್ಕೆ ಬಂದಿದೆ. ಆದರೆ ಯಾರು ಜಮೀನು, ಮನೆ ಕಳೆದುಕೊಂಡಿದ್ದಾರೆ ಅವರಿಗೆ ಪುನರ್ವಸತಿ ಮಾಡಿ, ಶಾಲೆ ಇಲ್ಲ, ಏನೇನೂ ಇಲ್ಲ. ಈವತ್ತಿನವರೆಗೆ ದುಡ್ಡನ್ನು ಕೊಟ್ಟಿಲ್ಲ ಇಲ್ಲೂ ಕೊಟ್ಟಿಲ್ಲ ಮುಲ್ಲಾಮಾರಿಯಲ್ಲೂ ಕೊಟ್ಟಿಲ್ಲ. ಬಸವಕಲ್ಯಾಣದಲ್ಲಿ ಮುಲ್ಲಾಮಾರಿಯಲ್ಲಿ ಕೊಟ್ಟಿಲ್ಲ. ಬೀದರ್‌ನಲ್ಲಿ ಕಾರಂಜಾದಲ್ಲಿ ಕೊಟ್ಟಿಲ್ಲ. ಈವತ್ತಿಗೂ ಕೂಡ ದುಡ್ಡನ್ನು ಕೊಟ್ಟಿಲ್ಲ ಪುನರ್ವಸತಿಯನ್ನು ಮಾಡಿ ಕೊಟ್ಟಿಲ್ಲ. ಪುನರ್ವಸತ ಮಾಡಿದರೂ ಶಾಲೆ ಇಲ್ಲ, ಒಂದು ವ್ಯವಸ್ಥೆ ಇಲ್ಲ ಅವರು ಈವತ್ತಿಗೂ ಹೋರಾಡುತ್ತಿದ್ದಾರೆ. ಅವರಿಗೆ ದುಡ್ಡು ಸಿಕ್ಕಿಲ್ಲ. ಅವರ ಗತಿ ಹೇಳಲು ಸಾಧ್ಯವಿಲ್ಲ. ಅದರ ಬಗ್ಗೆ ಏನು ನಿಶ್ಚಿತವಾದ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ಒಂದು. ಇನ್ನೊಂದು ಏನು ಕೇಳಿದ್ದೇನೆಂದರೆ, ಏನೇನು ಅನಾಹುತವಾಗಿದೆ, ಅವ್ಯವಹಾರವಾಗಿದೆ ಎಂದು ಕೇಳಿದ್ದಕ್ಕೆ ಬಹಳ ಅವ್ಯವಹಾರವಾಗಿದೆಯೆಂದು ಇಲ್ಲಿ ತೋರಿಸಿದ್ದಾರೆ. ಆದರೆ ಎಲ್ಲಾ ವಿಚಾರದ ಬಗ್ಗೆ ಪ್ರಗತಿಯಲ್ಲಿದೆ, ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ 15–20 ವಿಚಾರಣೆ ಪ್ರಗತಿಯಲ್ಲೇ ಇದೆ. ಈ ವಿಚಾರಣೆಯ ಪ್ರಗತಿ ಯಾವಾಗ ಮುಗಿಯಬೇಕು? ಈ ಪ್ರಗತಿಯಲ್ಲಿರುವ ವಿಚಾರಣೆಗಳು ಯಾವಾಗ ಮುಗಿಯುತ್ತವೆ? ಅಮರ್ಜಾ ಯೋಜನೆಯಲ್ಲೇನೋ ಅವ್ಯವಹಾರ ನಡೆಸಿದ ನಿವೃತ್ತ ಅಧಿಕಾರಿ ಮೇಲೆ ದಾವೆ ಹೂಡಿದ್ದೀರಿ, ಅವ್ಯಹಾರ ನಡೆಸಿದವರಲ್ಲಿ ಎಷ್ಟು ಜನ ಅಧಿಕಾರಿಗಳು ನಿವೃತ್ತರಾಗಿದ್ದಾರೆ? ಯಾರನ್ನು ವಿಚಾರಣೆಗೆ ನೇಮಿಸಿದ್ದೀರೋ, ಆ ವಿಚಾರಣಾ ಅಧಿಕಾರಿಯೇ ನಿವೃತ್ತಿಯಾಗಿದ್ದಾರೆನೋ ಎಂಬುದನ್ನು ತಾವು ಹೇಳಬೇಕು. ವರ್ಷಾನುಗಟ್ಟಲೆ ಆದರೂ ವಿಚಾರಣೆ ಏನೂ ಆಗುತ್ತಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಏನಾದರೂ ಕಠಿಣ ಕ್ರಮ ತೆಗೆದುಕೊಂಡು ಯಾವಾಗ ಇದನ್ನು ತೀರ್ಮಾನ ಮಾಡುತ್ತೀರಿ ಎನ್ನತಕ್ಕಂಥ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಬೇಕು. ಇನ್ನು ಜೀರಾದ್ ತಾಲ್ಲುಕಿನ ಗೋದಾವರಿ ಬೇಸಿನ್‌ನ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಕೇಳಿದ್ದೇನೆ. ನಾವು ಕೃಷ್ಣಾ ಬೇಸಿನ್‌ಗೂ ಬರುವುದಿಲ್ಲ ಅಥವಾ ಕಾವೇರಿ

ಬೇಸಿನ್‌ಗೂ ಬರುವುದಿಲ್ಲ. ಗೋದಾವರಿ ಬೇಸಿನ್‌ನಲ್ಲಿ ನಾವು ಬರುತ್ತೇವೆ. ಮಾಂಜ್ರಾ ನದಿ ವ್ಯಾಪ್ತಿಯಲ್ಲಿನ ನಾಲ್ಕು lift irrigation projects ಬಗ್ಗೆ ತಾವು ಹೇಳಿದ್ದೀರಿ. 2007–08ರಲ್ಲಿ ಇದನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದೀರಿ. ಅದರ ಕೆಲಸ ಶುರುವಾಗಿದೆಯೇ ಇಲ್ಲವೋ, ಅಥವಾ ಅದಕ್ಕೆ ಟೆಂಡರ್ ಕರೆದಿದ್ದಾರೆಯೇ, ಅದು ಯಾವ ಹಂತದಲ್ಲಿದೆ ಎಂಬ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ನೀಡಬೇಕು. ತಾವು ಯಾವಾಗ ಅದನ್ನು ರೆಡಿ ಮಾಡುತ್ತೀರಿ, ಇನ್ನೊಂದು, ಔರಾದ್ ತಾಲ್ಲೂಕಿನಲ್ಲಿ ನಿಜಮಸಾಗರದ ಹೊರಗಡೆ ಹೋಗತಕ್ಕಂಥ ನೀರನ್ನು ಎಲ್ಲಿ ಬಳಸಿಕೊಳ್ಳುತ್ತಿದ್ದೀರಿ ಎಂಬುದನ್ನು ಹೇಳಬೇಕು. ಬಚಾವತ್ ತೀರ್ಪಿನ ಪ್ರಕಾರ 2.5 ಟಿಎಂಸಿ ನೀರಿನ ಹಂಚಿಕೆಯಾಗಿದೆ ಎಂದು ಹೇಳಿದ್ದೀರಿ. ಅದರಲ್ಲಿ 0.742 ಟಿಎಂಸಿ ನೀರಿನ ಬಳಕೆಯಾಗಿದೆ. ಇನ್ನು 1.758 ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳಬೇಕಾಗಿದೆ. ಇದನ್ನು ಇನ್ನೂ ಯಾವಾಗ ಬಳಸಿಕೊಳ್ಳುತ್ತೀರಿ? ಇದಕ್ಕಾಗಿ 43 ಕಾಮಗಾರಿ ಪ್ರಸ್ತಾಪಿಸಲಾಗಿದೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಈಗಾಗಲೇ ಬೇಕಾಧಷ್ಟು ಸರ್ವೆ ಮಾಡಿಬಿಟ್ಟಿದ್ದಾರೆ. ಆದರೆ ಅದು ಇವತ್ತಿನವರೆಗೂ ಜಾರಿಯಾಗಿಲ್ಲ. ನಬಾರ್ಡ್ ಅಥವಾ ವರ್ಲ್ಡ್ ಬ್ಯಾಂಕ್ ಅಥವಾ ಇನ್ನಿತರ ಯಾವುದಾದರೂ ಸಂಸ್ಥೆಯಿಂದ ಸಾಲ ಪಡೆದು ಸಂಪೂರ್ಣವಾಗಿ ತತ್‌ಕ್ಷಣದಿಂದಲೇ ಈ ಕಾಮಗಾರಿಗಳನ್ನು ಆರಂಭಿಸತಕ್ಕಂಥ ಕೆಲಸವನ್ನು ತಾವು ಮಾಡುತ್ತೀರಾ? ಇದರ ಬಗ್ಗೆ ಮಾನ್ಯ ಸಚಿವರು ಖಚಿತವಾದ ಉತ್ತರ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎನ್.ಎಸ್. ಬೋಸರಾಜ್: ಮಾನ್ಯ ಅಧ್ಯಕ್ಷರೆ, ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಬರತಕ್ಕಂಥ ನೀರಾವರಿ ಯೋಜನೆಗಳ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಅದರೆ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿನ ಯೋಜನೆಗಳ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಪ್ರಸ್ತಾಪಿಸಿಲ್ಲ. ಆ ಜಿಲ್ಲೆಗಳೂ ಸಹ ಹೈದರಾಬಾದ್–ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲೇ ಬರುತ್ತವೆ. ಹಿರೇಹಳ್ಳ Project ಬಗ್ಗೆಯಾಗಲಿ, ಮಸ್ಕಿನಾಲಾ project ಬಗ್ಗೆಯಾಗಲಿ, ರಾಂಪುರ lift irrigation project ಬಗ್ಗೆಯಾಗಲಿ, ನಾರಾಯಣಪುರದ right and left bank canal ಬಗ್ಗೆಯಾಗಲಿ, ದೇವದುರ್ಗ, ಲಿಂಗಸಗೂರು ಮತ್ತು ರಾಯಚೂರಿನಲ್ಲಿನ project ಬಗ್ಗೆಯಾಗಲಿ, ತುಂಗಭದ್ರಾ project ಬಗ್ಗೆಯಾಗಲಿ, ರಾಯಚೂರು ಅಥವಾ ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿರತಕ್ಕ ಯಾವೊಂದು ನೀರಾವರಿ project ಬಗ್ಗೆಯಾಗಲಿ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಪ್ರಸ್ತಾಪಿಸಿಲ್ಲ. ಇದರ ಬಗ್ಗೆ ವಿವರಣೆ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಕೇಳಿದಂತಹ ಪ್ರಶ್ನೆಗಳಿಗೆ ಸ್ಪಷ್ಟವಾದಂತಹ ಉತ್ತರವನ್ನು ನಾನು ಕೊಟ್ಟಿರುವುದನ್ನು ತಾವು ಗಮನಿಸಿರಬಹುದು. ಮಾನ್ಯ ಸದಸ್ಯರು ಕೇಳಿದಂತಹ

ಪ್ರಶ್ನೆಗೆ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಈ ಕೆಳಕಂಡ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಪ್ರಗತಿಯಲ್ಲಿರುತ್ತವೆ ಎಂದು ಎಲ್ಲಾ ಯೋಜನೆಗಳ ಬಗ್ಗೆ ವಿವರಗಳನ್ನು ನನ್ನ ಉತ್ತರದಲ್ಲಿ ಕೊಟ್ಟಿದ್ದೇನೆ. ಕಾರಂಜಾ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ತಾವು ಗಮನಿಸಿರಬಹುದು. ಈ ವರ್ಷ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ 29 ಯೋಜನೆಗಳಿಗಾಗಿ 1042 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದರಲ್ಲಿ ಕಾರಂಜಾ ಯೋಜನೆ ಕೂಡ ಸೇರಿದೆ. ಅದನ್ನು ಈ ವರ್ಷವೇ ಮುಗಿಸಬೇಕೆನ್ನುವಂತಹ ನಿಶ್ಚಯವನ್ನು ಈಗಾಗಲೇ ನಾವು ಮಾಡಿದ್ದೇವೆ, ಅದನ್ನು ಮಾಡುತ್ತೇವೆ. ಯಾವ್ಯಾವ ಅಧಿಕಾರಿಗಳು ಅವ್ಯವಹಾರ ಮಾಡಿದ್ದಾರೆ ಅವರ ಮೇಲೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ತುಂಬಾ ಸ್ಪಷ್ಟವಾದ ಉತ್ತರವನ್ನು ನಾವು ಕೊಟ್ಟಿದ್ದೇನೆ. ಕಾರಂಜಾ ಯೋಜನೆಯಲ್ಲಿ ಮತ್ತು ಇನ್ನಿತರೆ ಯಾವ್ಯಾವ ಯೋಜನೆಗಳಲ್ಲಿ ಯಾವ್ಯಾವ ಅಧಿಕಾರಿಗಳು ಎಷ್ಟೆಷ್ಟರ ಮಟ್ಟಿಗೆ ಅವ್ಯವಹಾರ ಮಾಡಿದ್ದಾರೆ ಅವರ ಮೇಲೆ ಏನೇನು ನಾವು ಕ್ರಮ ತೆಗೆದುಕೊಂಡಿದ್ದೇವೆ ಎಂಬ ವಿವರಗಳನ್ನು ಸಹ ನಾನು ಕೊಟ್ಟಿದ್ದೇನೆ. ಈಗಾಗಲೇ ನೀವು ಗಮನಿಸಿರಬಹುದು, ವಿಶೇಷವಾಗಿ ಈ ರೀತಿ ಯಾರ್ಯಾರು ಅಧಿಕಾರಿಗಳು ತಪ್ಪು ಮಾಡಿದ್ದಾರೋ, ಅವರನ್ನು ಇದೇ ಮೊದಲ ಬಾರಿಗೆ suspension ನಲ್ಲಿ ಇಟ್ಟಿದ್ದೇವೆ. ಅವರನ್ನು suspension ನಲ್ಲಿಟ್ಟು enquiry ಮಾಡಿಸುತ್ತಿದ್ದೇವೆ. ಈಗಾಗಲೇ retired District or Sessions Judgeಗಳ ಮುಖಾಂತರ enquiry ನಡೆಸುತ್ತಿದ್ದೇವೆ. ಅವರಿಗೆ time bound ಕೂಡ ಫಿಕ್ಸ್ ಮಾಡಿದ್ದೇವೆ. ಹಿಂದೆ enquiry ಮಾಡುತ್ತಿದ್ದಂತಹ Sessions Judgeಗಳು ನಿಧಾನವಾಗಿ ವಿಚಾರಣೆ ಮಾಡುತ್ತಿದ್ದಾರೆ ಎಂಬ ದೂರುಗಳು ಇದ್ದವು. ಅವರಿಗೂ ಸಹ ತಕ್ಷಣವೇ ಸೂಚನೆ ಕೊಟ್ಟು, ಶೀಘ್ರದಲ್ಲೇ ವರದಿ ಸಲ್ಲಿಸಿ, ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲು ಅನುಕೂಲ ಮಾಡಿಕೊಡಬೇಕೆಂದು ಹೇಳಿದ್ದೇವೆ. ಬೆಣ್ಣೆತೊರೆ ಯೋಜನೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಈಗಾಗಲೇ ಕ್ರಮ ತೆಗೆದುಕೊಂಡಿರತಕ್ಕಂಥದ್ದು ತಮಗೆ ಗೊತ್ತಿದೆ. ಅದರ ಬಗ್ಗೆ ವಿಚಾರಣೆಗೆ ಈಗಾಗಲೇ retired Sessions Judge ನೇಮಕ ಮಾಡಲಾಗಿದೆ. ಮೂರು ತಿಂಗಳೊಳಗಾಗಿ ವರದಿ ನೀಡಬೇಕೆಂದು ಈಗಾಗಲೇ ಅವರಿಗೆ ಸೂಚನೆ ಕೊಡಲಾಗಿದೆ. ತಾವು ಅಸಕ್ತಿಯಿಂದ ಪ್ರಶ್ನೆಗಳನ್ನು ಕೇಳಿದ್ದೀರಿ. ಇದರಿಂದ ನನಗೆ ತುಂಬಾ ಸಂತೋಷವಾಗಿದೆ. ಯಾವ್ಯಾವ ಯೋಜನೆಗಳು ಯಾವ್ಯಾವ ಜಿಲ್ಲೆಗಳಲ್ಲಿ ಪ್ರಗತಿಯಲ್ಲಿದೆ ಎಂದು ಕೇಳಿದ್ದೀರಿ, ಅದರ ವಿವರ ಕೂಡ ನಾನು ಕೊಟ್ಟಿದ್ದೇನೆ. ಬೀದರ್ ಜಿಲ್ಲೆಯಲ್ಲಿ ಯಾವ್ಯಾವ ಯೋಜನೆಗಳು ಪ್ರಗತಿಯಲ್ಲಿವೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವ್ಯಾವ ಯೋಜನೆಗಳು ಪ್ರಗತಿಯಲ್ಲಿವೆ ಎಲ್ಲಾ ವಿವರ ಕೊಟ್ಟಿದ್ದೇವೆ. ಮಾನ್ಯ ಬೋಸ್‌ರಾಜ್‌ರವರು ರಾಯಚೂರು ಮತ್ತು ಕೊಪ್ಪಳ

ಜಿಲ್ಲೆಗಳ ಯೋಜನೆಗಳ ಬಗ್ಗೆ ಹೇಳಿಲ್ಲವೆಂದರು. ಆದರೆ ಅವುಗಳ ಬಗ್ಗೆ ಕೂಡ ಉತ್ತರದಲ್ಲಿ ಹೇಳಲಾಗಿದೆ. ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಬೇಕು, ಅದನ್ನು ಯಾವಾಗ ಮುಗಿಸುತ್ತೇವೆ ಎನ್ನುವುದನ್ನು ಸಹಿತ ಪೂರ್ಣ ಯೋಜನೆಗಳ ವಿವರಗಳೊಂದಿಗೆ ತಿಳಿಸಿದ್ದೇವೆ. ಏನಾನು action ನಾವು ತೆಗೆದುಕೊಳ್ಳುತ್ತಿದ್ದೇವೆ ಎನ್ನುವುದರ ಪೂರ್ಣ ವಿವರಗಳನ್ನು ಸಹ ನಾನು ಕೊಟ್ಟಿದ್ದೇನೆ. ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದರು. ತಾವು ಪ್ರಶ್ನೆ ಕೇಳಿದ್ದರಿಂದ ಸಣ್ಣ ನೀರಾವರಿ ಇಲಾಖೆಯಿಂದ ವಿವರ ತರಿಸಿ ಕೊಡಲಾಗಿದೆ. ಅದರ ಪೂರ್ಣ ವಿವರಗಳು ತಮಗೆ ಬೇಕೆಂದರೆ ತಾವು ಆ ಬಗ್ಗೆ ಸಣ್ಣ ನೀರಾವರಿ ಇಲಾಖೆಗೆ ಪ್ರಶ್ನೆ ಕೇಳಿದರೆ, ಅಲ್ಲಿಂದ ನಮಗೆ ಉತ್ತರ ಸಿಗುತ್ತದೆ. ನಾನು ಇಷ್ಟನ್ನು ಮಾತ್ರ ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಬಹಳ ಕಳಕಳಿಯಿಂದ ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಪ್ರಶ್ನೆ ಕೇಳಿದ್ದರೆ. ಸ್ಪಷ್ಟವಾಗಿ ಈ ವರ್ಷವೇ ಯಾವ್ಯಾವ ಯೋಜನೆಗಳನ್ನು ಮುಗಿಸುತ್ತೇವೆ ಎಂಬ ವಿವರಗಳನ್ನು ಉತ್ತರದಲ್ಲಿ ಕೊಟ್ಟಿದ್ದೇನೆ. ಏನೇನು action ತೆಗೆದುಕೊಂಡಿದ್ದೇವೆ ಎಂಬ ವಿವರಗಳನ್ನೂ ಸಹ ನಾನು ಕೊಟ್ಟಿದ್ದೇನೆ. ಇಷ್ಟು ಮಾತ್ರ ನಾನು ತಮಗೆ ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯಕ್ಕೆ ಗೋದಾವರಿ ಟ್ರಿಬ್ಯೂನಲ್‌ನಿಂದ 21 ಟಿಎಂಸಿ ನೀರು allocate ಆಗಿದೆ. ಅದನ್ನು ತಾವು ಯಾವ ಯೋಜನೆಯಲ್ಲಿ ಉಪಯೋಗ ಮಾಡಿದ್ದೀರಿ, ಅದಕ್ಕೇನಾದರೂ master plan ಮಾಡಿದ್ದೀರಾ, ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕು. ಎಷ್ಟು Chief Engineer ಹುದ್ದೆಗಳು ನಿಮ್ಮಲಿ ಖಾಲಿ ಇವ ಎಂಬುದನ್ನು ಹೇಳಬೇಕು. ನಿರಂತರವಾಗಿ ಹಿಂದಿನ ನೀರಾವರಿ ಮಂತ್ರಿಗಳು ಹೇಳುತ್ತಲೇ ಬಂದಿದ್ದಾರೆ. 1964ರಲ್ಲಿ ಪ್ರಾರಂಭವಾಗಿರತಕ್ಕಂಥ ಯೋಜನೆಗಳು ಇನ್ನೂ ಮುಗಿದಿಲ್ಲ. ಬೇಕಾದರೆ ನಾನು ನಿಮಗೆ ಅದರ ಬಗ್ಗೆ ನಿದರ್ಶನ ಕೊಡುತ್ತೇನೆ. ಆರು Chief Engineer ಹುದ್ದೆಗಳು ನಿಮ್ಮಲ್ಲಿ ಖಾಲಿ ಇವೆ. ಆ ಹುದ್ದೆಗಳನ್ನು ತುಂಬದೆ ಅಲ್ಲಿ ಯಾವುದೇ ಒಂದು decision ಮಾಡಲಿಕ್ಕಾಗುವುದಿಲ್ಲ. ಗೋದಾವರಿ diversionನಿಂದ ನಮಗೆ ಬಂದಿರತಕ್ಕಂಥ 21 ಟಿಎಂಸಿ ನೀರನ್ನು ನೀವು ಯಾವ ಯೋಜನೆಗಳಿಗೆ ಉಪಯೋಗ ಮಾಡುತ್ತೀರಿ ಮತ್ತು ಯಾವಾಗ ಉಪಯೋಗ ಮಾಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲ್‌ರವರಿಗೆ ನಾನು ಹೇಳುವುದಿಷ್ಟೇ. ಹಿಂದೆ ಯಾವ್ಯಾವ ರೀತಿ ಇತ್ತೋ, ಹಿಂದಿನ ಮಂತ್ರಿಗಳು ಏನೊಂದು ಉತ್ತರಗಳನ್ನು ಕೊಟ್ಟಿದ್ದರೋ, ಅದಕ್ಕೆ ನಾನು ಜವಾಬ್ದಾರನಲ್ಲ. ನಾನು ತಮ್ಮ ಮುಂದೆ ನೇರವಾದಂತಹ ಸ್ಟೇಟ್‌ಮೆಂಟ್ ಅನ್ನೇ ಇಟ್ಟಿದ್ದೇವೆ. ಯಾವುದೇ ಕಾಲದಲ್ಲಿ ಶುರುವಾಗಿದ್ದರೂ ಕೂಡ ಯಾವ್ಯಾವ

ಯೋಜನೆಗಳನ್ನು ಈ ವರ್ಷವೇ ಮುಗಿಸುತ್ತೇವೆ ಎನ್ನುವಂತಹ ಪಟ್ಟಿಯನ್ನು ನಾನು ತಮ್ಮ ಮುಂದಿಟ್ಟಿದ್ದೇನೆ. ಎಷ್ಟೆಷ್ಟು ಹಣ ಅದಕ್ಕೆ ಕೊಟ್ಟಿದ್ದೇನೆ ಎಂಬ ವಿವರ ತಮ್ಮ ಮುಂದಿಟ್ಟಿದ್ದೇನೆ. ಒಂದೊಂದು ಯೋಜನೆಗಳಿಗೆ ಒಬ್ಬೊಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ. ಪ್ರತಿ ತಿಂಗಳಿಗೆ ಎಷ್ಟು ಕೆಲಸ ಮಾಡಬೇಕೆಂದು time bound ಹಾಕಿ, ಅವರಿಂದ ಎಷ್ಟು ಕೆಲಸಗಳನ್ನು ನಾವು ತೆಗೆಯಿಕೊಳ್ಳುತ್ತಿದ್ದೇವೆ. ಹಿಂದಿನ ತಿಂಗಳು ಏನು ಕೆಲಸ ಮಾಡಿದ್ದೀರಿ ಮುಂದಿನ ತಿಂಗಳು ಏನು ಕೆಲಸ ಮಾಡುತ್ತೀರಿ ಎಂಬ ವಿವರಗಳನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇವೆ. ನಮ್ಮ commitment ಏನು ಕೊಟ್ಟಿದ್ದೇವೋ, ಇದನ್ನು ನಾವು ಮಾಡುತ್ತೇವೆ. ಈಗಾಗಲೇ ಮೂರು ತಿಂಗಳಾಗುತ್ತಾ ಬಂದಿದೆ. ಒಂದು ವರ್ಷದಲ್ಲಿ ಏನು ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವೆ ಎನ್ನುವುದನ್ನು ಹೇಳಿದ್ದೇವೆ. ಇನ್ನು ಮೂರು ತಿಂಗಳಿನಲ್ಲಿ ಎಷ್ಟು ಕೆಲಸವಾಗಿದೆ ಎಂಬುದರ ಬಗೆಗಿನ ವಿವರಗಳನ್ನೂ ಸಹ ತಮಗೆ ಕೊಡುತ್ತೇನೆ. Physically ಏನು improvement ಆಗಿದೆ, ಅದರ ಜೊತೆಗೆ financially ಕೂಡ ಏನು ಖರ್ಚು ಮಾಡಿದ್ದೇವೆ ಎನ್ನುವುದರ ವಿವರಗಳನ್ನು ನಾವು ನಿಮಗೆ ಕೊಡುವುದರಲ್ಲಿದ್ದೇವೆ. ಹೀಗೆ ಯೋಜನೆಗಳನ್ನೇನು ನಾವು ಈ ವರ್ಷದಲ್ಲಿ ತೆಗೆದುಕೊಂಡಿದ್ದೇವೋ, ಇದನ್ನು ಖಂಡಿತವಾಗಿಯೂ ಪೂರ್ಣ ಮಾಡೇ ಮಾಡುತ್ತೇವೆ ಎನ್ನುವಂತಹ ವಿಚಾರವನ್ನು ಹೇಳುತ್ತೇವೆ. ಖಾಲಿ ಹುದ್ದೆಗಳಿವೆ ನಿಜ, ಆದರೆ ಅದು ಇವತ್ತು ಖಾಲಿ ಇರುವುದಲ್ಲ. ಅನೇಕ ಹುದ್ದೆಗಳು ಬಹಳ ದಿನಗಳಿಂದ ಖಾಲಿ ಇವೆ. ಕೆಲವು ಹುದ್ದೆಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಇದೆ, ಇದಲ್ಲದೆ ಬೇರೆ ಬೇರೆ ಸಮಸ್ಯೆಗಳಿವೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಖಾಲಿ ಹುದ್ದೆಗಳು ಇದ್ದರೂ ಕೂಡ ಅವುಗಳನ್ನು ಭರ್ತಿ ಮಾಡಿಕೊಳ್ಳಲು ಏನು ಮಾಡಬೇಕೋ ಅದಕ್ಕೆ ಸರ್ಕಾರ ಪ್ರಯತ್ನವನ್ನು ನಡೆಸುತ್ತಿದೆ. ಜೊತೆಗೆ, ಖಾಲಿ ಹುದ್ದೆಗಳಿವೆ ಎನ್ನುವಂತಹ ಒಂದೇ ಕಾರಣಕ್ಕಾಗಿ ಕಾಮಗಾರಿಗಳನ್ನು ನಿಲ್ಲಿಸುವಂತಹ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಮಾನ್ಯ ಬಿ. ಶಿವರಾಂ ಅವರದು.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ,.....

MR. SPEAKER: No, No, No. ಈಗಾಗಲೇ ಎರಡು ಪ್ರಶ್ನೆಗಳಿಗೇ ಇಪ್ಪತ್ತೈದು ನಿಮಿಷಗಳಾಗಿವೆ. ಒಂದು ಗಂಟೆಯೊಳಗೆ ನಾನು ಪ್ರಶ್ನೋತ್ತರವನ್ನು ಮುಗಿಸಬೇಕು. ನೀವೆಲ್ಲರೂ interfere ಆಗಿ, ಇದು ಪ್ರಾಮುಖ್ಯವಾದ ಪ್ರಶ್ನೆ ಎಂದರೆ, ಒಂದು ಗಂಟೆ ಸಮಯವಾದ ತಕ್ಷಣ ನಾನು ಪ್ರಶ್ನೋತ್ತರ ನಿಲ್ಲಿಸುತ್ತೇನೆ. ಉಳಿದ ಪ್ರಶ್ನೆಗಳು lapse ಆಗುತ್ತವೆ. ನಾನು ಪ್ರತಿ ದಿನ ನಾನು ನಿಯಮಗಳನ್ನು ಅನುಸರಿಸಿ ನಿಮಗೆಲ್ಲರಿಗೂ accommodate ಮಾಡಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಅವರು ಒಂದು ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಾನು ಒಂದು ಪ್ರಶ್ನೆಯನ್ನು ಮಾತ್ರ ಕೇಳುತ್ತೇನೆ ಎಂದು ಹೇಳಿ ಅವರು ಎದ್ದು ನಿಂತಿಲ್ಲ. ಅವರು ಎದ್ದು ನಿಂತುಕೊಂಡು ಕೇಳುತ್ತಲೇ ಇರುತ್ತಾರೆ. ಏನಿದು? ಆ ತರಹದ್ದನ್ನು ಸಹಿಸಿಕೊಳ್ಳಲಿಕ್ಕೆ ಸಾಧ್ಯವೇ ಆಗುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ತಾವು ಅನುಮತಿ ಕೊಡುತ್ತೀರಲ್ಲವೇ?

ಅಧ್ಯಕ್ಷರು: ಹೌದು ಸ್ವಾಮಿ, ನೀವು ಮಾನ್ಯ ವಿರೋಧ ಪಕ್ಷದ ನಾಯಕರಾಗಿದ್ದೀರಿ. ತಾವು ತಮ್ಮ ಪಕ್ಷದ ಸದಸ್ಯರಿಗೆ ಸ್ವಲ್ಪ ಹೇಳಬೇಕು. ನಮ್ಮ ಪರ್ಮಿಷನ್ ತೆಗೆದುಕೊಳ್ಳದೆ ಎದ್ದು ನಿಂತು ಪ್ರಶ್ನೆ ಕೇಳುತ್ತಿದ್ದರೆ ಹೇಗೆ? ಒಂದೊಂದು ಪ್ರಶ್ನೆಗೆ ಹದಿನೈದು ನಿಮಿಷಗಳಾದರೆ ಹೇಗೆ ನಾನು ಒಂದು ಗಂಟೆಯೊಳಗಾಗಿ ಪ್ರಶ್ನೋತ್ತರವನ್ನು ಮುಗಿಸಲು ಸಾಧ್ಯವಾಗುತ್ತದೆ?

ಶ್ರೀ ಎನ್. ಧರ್ಮಸಿಂಗ್: ಇದು ಬಹಳ ಮಹತ್ವವಾದಂತಹ ಪ್ರಶ್ನೆಯಾಗಿದೆ.

ಅಧ್ಯಕ್ಷರು: ಎಲ್ಲಾ ಮಹತ್ವದ್ದೇ. ಯಾವುದು ಮಹತ್ವವಿಲ್ಲ ಹೇಳಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಪ್ರಾಮುಖ್ಯವಾದಂತಹ ಪ್ರಶ್ನೆಯೊಂದನ್ನು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಕೇಳಿದ್ದಾರೆ. ಕೃಷ್ಣಾ ಬೇಸಿನ್‌ನಲ್ಲಿ ಇರತಕ್ಕಂಥ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಇರತಕ್ಕಂಥ Irrigation Projects ಕಾಮಗಾರಿಗಳನ್ನು ಮಾಡಲು ತಮ್ಮ ಸರ್ಕಾರದವರು ಎಷ್ಟು ದುಡ್ಡು ಇಟ್ಟಿದ್ದೀರಿ? 2004ರಲ್ಲಿ 3025 ಕೋಟಿ ರೂಪಾಯಿಗಳನ್ನು ಮೊದಲು ಮೀಸಲಿಡಲಾಗಿತ್ತು. ನಾನು ಮುಖ್ಯಮಂತ್ರಿಯಾದ ಮೇಲೆ ಅದನ್ನು 3924 ಕೋಟಿ ರೂಪಾಯಿಗಳಿಗೆ we have increased. ಅಷ್ಟೆಲ್ಲಾ ನಾವು ಕೊಟ್ಟಿದ್ದೇವೆ. ಇವತ್ತು Krishna basinನಲ್ಲಿ incomplete project complete ಆಗಬೇಕಾದರೆ ಬಹಳಷ್ಟು ಹಣ ಕೊಡಬೇಕಾಗಿದೆ. ಈಗಾಗಲೇ ಯಾವೊಂದು ವರ್ಕ್‌ಗಳನ್ನು ಕಂಪ್ಲೀಟ್ ಮಾಡುತ್ತೇವೆ ಎಂದು ತಾವು ಕಮಿಟ್‌ಮೆಂಟ್ ಮಾಡಿಕೊಂಡಿದ್ದೀರೋ, ಅದೆಲ್ಲಕ್ಕೂ ಕೂಡ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕಾಗಿತ್ತು. ಕಾರಂಜಾ ಪ್ರಾಜೆಕ್ಟ್ ಪ್ರಾರಂಭವಾಗಿದ್ದು 1972, 9 ಕೋಟಿ ಪ್ರಾಜೆಕ್ಟ್ 479 ಕೋಟಿಯಾಗಿದೆ ನನ್ನ ಇಪ್ಪತ್ತು ತಿಂಗಳ ಅವಧಿಯಲ್ಲೂ ಆ ಬಗ್ಗೆ ಕಾಳಜಿ ವಹಿಸಲು ಪ್ರಯತ್ನಿಸಲಾಗಿದೆ. ಮತ್ತೊಂದು ಪ್ರಶ್ನೆ ಕೃಷ್ಣಾ–ಗೋದಾವರಿ ಬಗ್ಗೆ. ಇದೇ ಸದನದಲ್ಲಿ ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಅನಂತಕುಮಾರ್‌ರವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು. ಈವತ್ತು ಅಕ್ರಮ ನಡೆಯುತ್ತಿದೆ ಅವರೆ ಅಂತ. ಆಗ ನಾನು ಎಲ್ಲಾ ವಿರೋಧ ಪಕ್ಷದ ನಾಯಕರ ನಿಯೋಗವನ್ನು ಪ್ರಧಾನಮಂತ್ರಿಗಳ ಬಳಿಗೆ ತೆಗೆದುಕೊಂಡು ಭೇಟಿ ಮಾಡಿದ್ದೇನೆ, ಇವತ್ತು ಟ್ರಿಬ್ಯೂನಲ್ಲು verdict ಕೂಡ ಬಂದಿದೆ, ಈ ಎಲ್ಲಾ ವಿಷಯಗಳ ಬಗ್ಗೆ

ಸಮಗ್ರವಾಗಿ ಶಿವಾನಂದ ಪಾಟೀಲರು ಕೂಡ ನೀರಾವರಿ ಬಗ್ಗೆ ಹೆಚ್ಚಿನ ಆಸಕ್ತಿಯಿಂದ ಕೇಳುತ್ತಾರೆ. ಪ್ರಮುಖವಾದ ಪ್ರಶ್ನೆಯನ್ನು ಸದನದಲ್ಲೇ ಅವರು ಕೇಳಿದ ಮೇಲೆ, ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ನೀಡುತ್ತಿಲ್ಲ. ತಾವು ಏಲೋ ಮಾಡುವುದಿಲ್ಲವೆಂದರೆ ಹೇಗೆ? ಇವತ್ತು ನಾನು ನೀರಾವರಿ ಸಚಿವರನ್ನು ಕೇಳುತ್ತೇನೆ, ಮೊದಲು ನೀರಾವರಿ ಸಚವರು ಏನೆಂದು ಉತ್ತರ ಕೊಟ್ಟರು, ನನಗೆ ಸಂಬಂಧವಿಲ್ಲ, ಸರ್ಕಾರ ಹೋಗಿ ಮತ್ತೊಂದು ಸರ್ಕಾರ ಬಂದ ಮೇಲೆ ಈ ಏನು ನೀರಾವರಿ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯದಲ್ಲಿ ಮಾಡಬೇಕಾಗಿದೆ, ವಿಶೇಷವಾಗಿ ಗಡಿ ಭಾಗದಲ್ಲಿರುವುದರ ಬಗ್ಗೆ ಆಸಕ್ತಿ ವಹಿಸಬೇಕು ಅಂತ. ಅದರಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರೆಂಬುದನ್ನು ಸ್ಪಷ್ಟವಾಗಿ ಸದನಕ್ಕೆ ತಿಳಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ ವಿರೋಧ ಪಕ್ಷದ ನಾಯಕರು ಕೇಳಿದ ಪ್ರಶ್ನೆಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ, ಅವರು ಸ್ವಲ್ಪ ತಡವಾಗಿ ಬಂದರು. ಈ ಸರ್ಕಾರ ಬಂದ ನಂತರ, ಅವರು ಹೇಳಿದಂತೆ 30–45 ವರ್ಷಗಳಿಂದಲೂ ಕೂಡ ಅನೇಕ ಯೋಜನೆಗಳ ಘೋಷಣೆಯಾಯಿತು, ಅವರು ಇಡುತ್ತಿದ್ದಂತಹ ಹಣ ಎಲ್ಲಾ ಯೋಜನೆಗಳಿಗೂ ಒಂದು ರೀತಿಯ ದೇವಸ್ಥಾನದಲ್ಲಿ ಪ್ರಸಾದ ಕೊಟ್ಟಂತೆ ಸ್ವಲ್ಪ ಸ್ವಲ್ಪ ಕೊಡುತ್ತಾ ಹೋಗುತ್ತಿದ್ದರು, ನಾವು ಈ ರೀತಿಯಾಗಿ ಯೋಚನೆ ಮಾಡಿಲ್ಲ, ಈ ಭಾರಿ ನೀರಾವರಿ ಇಲಾಖೆಗೆ 2900 ಕೋಟಿ ರೂಪಾಯಿಗಳನ್ನು ಅಭಿವೃದ್ಧಿಗೋಸ್ಕರವೇ ಇವತ್ತು ಬಜೆಟ್‌ನಲ್ಲಿಟ್ಟಿರುವುದನ್ನು ತಾವು ನೋಡಿದ್ದೀರಿ. ಹೀಗಾಗಿ ನಾನು ವಿರೋಧಪಕ್ಷದ ನಾಯಕರಿಗೆ ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ನಿಮ್ಮ ಮಾರ್ಗದರ್ಶನವನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ, ಈಗಾಗಲೇ 39 ಯೋಜನೆಗಳನ್ನು ರಾಜ್ಯ ಸರ್ಕಾರ, ಅದು 30–35 ವರ್ಷವಾಗಿರಬಹುದು, ಗುರುತಿಸಿ, ಮೂರು ಬೇಸಿನ್‌ಗಳಾದ ಕಾವೇರಿ ಬೇಸಿನ್ ಇರಬಹುದು, ಕೃಷ್ಣಾ ಬೇಸಿನ್ ಇರಬಹುದು, ಡಬ್ಲ್ಯುಆರ್‌ಡಿ ಇರಬಹುದು ಎಲ್ಲಾ ಭಾಗದ್ದು ಸೇರಿಕೊಂಡು 1042 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿ ಮುಗಿಯುವಂತಹ ಯೋಜನೆಗಳಾಗಿಟ್ಟಿದ್ದೇವೆ, 39 ಯೋಜನೆಗಳನ್ನು ಈ ವರ್ಷದಲ್ಲೇ ಮುಗಿಸುವುದು. ಅದಕ್ಕೇ ನಾನು ಹೇಳಿದೆ, ಟೈಬಾಂಡ್ ಕಟ್ಟಿಕೊಂಡು, ಒಬ್ಬೊಬ್ಬ ಇಂಜಿನಿಯರ್ ಅನ್ನು ಒಂದೊಂದು ಯೋಜನೆಗೆ ಪ್ರತ್ಯೇಕವಾಗಿಟ್ಟು, ಅದನ್ನು ಮಾಡುವುದಕ್ಕೆ ನಾವು ಕಾರ್ಯಪ್ರವೃತ್ತರಾಗಿದ್ದೇವೆ, ಇನ್ನು ಮೂರು ತಿಂಗಳೊಳಗೆ ನಾವೇನು ಅಭಿವೃದ್ಧಿ ಮಾಡಿದ್ದೇವೆಂಬುದನ್ನು ನಾವು ಸ್ಟೇಟ್‌ಮೆಂಟ್ ಕೂಡ ಮಾಡುವವರಿದ್ದೇವೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ, ಹಿಂದೆ ತಾವು ಏನೇನು ಕೆಲಸಗಳನ್ನು ಮಾಡಿಕೊಂಡು ಬಂದಿದ್ದಿರೋ, ಆ ನಿಂತಿರುವ ಯೋಜನೆಗಳನ್ನು ಕೂಡ ಪೂರ್ಣಗೊಳಿಸುವ ದಿಸೆಯಲ್ಲಿ ಅತಿ ಹೆಚ್ಚು ಆಸಕ್ತಿಯನ್ನು ಕೊಟ್ಟು ಈ ಸರ್ಕಾರ ಕಾಮಗಾರಿಯನ್ನು ಮುಗಿಸುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಇವತ್ತು ಮಂತ್ರಿಗಳು ಏನು ಅಂಕಿಅಂಶಗಳನ್ನು ಹೇಳುತ್ತಿದ್ದಾರೆ ಆ ಪ್ರಕಾರ ಮಾಡುತ್ತೇವೆಂದು ಹೇಳಿದರು, ಕಳೆದ ಸಾರಿ ನಮ್ಮ ಆಯವ್ಯಯದ ಮೇಲೆ ನಮ್ಮ ಯಡಿಯೂರಪ್ಪನವರು ಮಾತನಾಡಿದರು, ನಮ್ಮ ಕಾಲದಲ್ಲಿ 29 ಪರ್ಸೆಂಟ್ ನೀರಾವರಿಗೆ ಹಣ ಇಟ್ಟರೆ ಅದನ್ನು 26 ಪರ್ಸೆಂಟ್‌ಗೆ ಕಡಿತಗೊಳಿಸಲಾಯಿತು. ಹಣದ ಕೊರತೆ ಇದೆ, ನೀವು ಇವತ್ತು, ರಾಜ್ಯದಲ್ಲಿ ಇರುವ ಅಪೂರ್ಣವಾದ ನೀರಾವರಿ ಯೋಜನೆಗಳನ್ನು ಮುಗಿಸಬೇಕಾದರೆ, ಅದಕ್ಕೆ ಕಮಿಟ್‌ಮೆಂಟ್ ಬೇಕು, ಹೆಚ್ಚಿನ ಹಣ ಬೇಕು, ಮತ್ತೆ ಕೆಲಸ ಮಾಡುವಂಥ ಇಂಜಿನಿಯರ್ಸ್ ಇಲ್ಲ. ಬೆಣ್ಣೆತೊರೆ ಪ್ರಾಜೆಕ್ಟ್ ದೇವರಾಜ ಅರಸ್‌ರವರ ಕಾಲದಲ್ಲಿ ಪ್ರಾರಂಭವಾಗಿ ಮುಗಿಯುವ ಹಂತದಲ್ಲಿದೆ, ನೀವು ಎಲ್ಲಾ ಹೋದ ಕಡೆಯಲ್ಲಿ ರಾಜಕೀಯವಾಗಿ ಎಲ್ಲಾ ಇಂಜಿನಿಯರ್ಸ್‌ಗಳನ್ನು ಸಸ್ಪೆಂಡ್ ಮಾಡುತ್ತಿದ್ದೀರಿ. ಅದಕ್ಕೆ ನಾವು ಅಡ್ಡಿ ಬರುತ್ತಿಲ್ಲ, ಇಲ್ಲಿ ವರದಿಗೂ ಒಂದು ಫೋನ್ ಮಾಡಿ ಕೂಡ ಹೇಳಿಲ್ಲ...

ಶ್ರೀ ಕೆ.ಎಸ್. ಈಶ್ವರಪ್ಪ: ಸಾಲಿಯಾನ ಸಮಿತಿಯನ್ನು ನೇಮಕ ಮಾಡಿದ್ದು ನೀವು, ಆ ಸಮಿತಿ ವರದಿಯನ್ನು ನಿಮಗೆ ಕೊಟ್ಟಿದ್ದಾರೆ, ಆ ವರದಿಯನ್ನು ಇಂಪ್ಲಿಮೆಂಟ್ ಮಾಡುವ ಶಕ್ತಿ ನಿಮಗಿರಲಿಲ್ಲ, ನಾವು ಇಂಪ್ಲಿಮೆಂಟ್ ಮಾಡಿ success ಮಾಡಿದರೆ, ಅದು ರಾಜಕೀಯವೆಂದು ಕರೆಯುತ್ತೀರಿ. ಇದು ಯಾವ ನ್ಯಾಯ?

ಶ್ರೀ ಎನ್. ಧರ್ಮಸಿಂಗ್: ಸಮಿತಿಯ ವರದಿಯ ಬಗ್ಗೆ ಆಕ್ಷೇಪಣೆ ಮಾಡುತ್ತಿಲ್ಲ....

ಶ್ರೀ ಕೆ.ಎಸ್. ಈಶ್ವರಪ್ಪ: ಸಮಿತಿಯ ವರದಿಯನ್ನು ಇಂಪ್ಲಿಮೆಂಟ್ ಮಾಡುವುದು ರಾಜಕೀಯವೆಂದು ಹೇಳುವುದಾದರೆ, ನನ್ನದೇನೂ ಅಭ್ಯಂತರವಿಲ್ಲ, ನಿಮ್ಮ ಬಾಯಿಯಲ್ಲಿ ಈ ಮಾತು ಬರಬಾರದಷ್ಟೆ.

ಶ್ರೀ ಎನ್. ಧರ್ಮಸಿಂಗ್: ಸಸ್ಪೆಂಡ್ ಮಾಡಿದ ಮೇಲೆ ಪರ್ಯಾಯ ವ್ಯವಸ್ಥೆ ಮಾಡಬೇಕಲ್ಲಾ, Alternative ಆಗಿ you have to give the posting. ನೀವು ಅಮಾನತ್ತು ಮಾಡಿ, ಕ್ರಮ ತೆಗೆದುಕೊಳ್ಳಿ, ವರದಿ ಬಂದ ಮೇಲೆ ಏನೇನು ಮಾಡಬೇಕೋ ಅದನ್ನು ಮಾಡಿ, ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಒಬ್ಬರನ್ನು ನೀವು ಅಮಾನತ್ತು ಮಾಡಿದರೆ ಮತ್ತೊಬ್ಬರು ಅಲ್ಲಿ ಕೆಲಸ ಮಾಡಲು ಬರಲೇಬೇಕಲ್ಲಾ, ಆ ವ್ಯವಸ್ಥೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ರಾಜಕೀಯ ಏನೆಂದು ಸ್ವಲ್ಪ ಹೇಳಿ, ರಾಜಕೀಯವೆಂದು ಹೇಳಿದ್ದಕ್ಕೆ ಸ್ವಲ್ಪ ನೋವಾಯಿತು.

ಶ್ರೀ ಎನ್. ಧರ್ಮಸಿಂಗ್: ರಾಜಕೀಯವಲ್ಲ, ಬೇಕಾದ್ದು ಮಾಡಿ ಎಂದು ಹೇಳುತ್ತೇನೆ ಬೇಡಿಕೆಯ ಮೇಲೆ ಮಾತನಾಡುವ ಕಾಲದಲ್ಲಿ ಯಾರ್‍ಯಾರು ಹೇಳಿದ್ದಾರೆ,

ಎಲ್ಲೆಲ್ಲಿ ಮಾಡುತ್ತಿದ್ದಾರೆ ಅದರ ಬಗ್ಗೆ ನಾವು ಹೇಳುತ್ತೇವೆ. ಒಂದು ಅಂಶವನ್ನು ತಮಗೆ ಹೇಳಬಯಸುತ್ತೇನೆಂದರೆ, ಆ ಭಾಗದಲ್ಲಿರುವ ಇರಿಗೇಷನ್ ಪ್ರಾಜೆಕ್ಟ್ ಆಗಲೇಬೇಕು, ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ, ಎಲ್ಲಾ ಕಡೆ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆ ಅವನ್ನು ತುಂಬಿರಿ, ತುಂಬಿ ಸರಿಯಾದ ರೀತಿಯಲ್ಲಿ ಮಾಡಿರೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ಇವತ್ತು ನಮ್ಮ ಸರ್ಕಾರ ಕೃಷ್ಣಾ ನದಿಯ ಆ ಭಾಗಕ್ಕೆ ವಿಶೇಷವಾಗಿ ಯಾವ್ಯಾವ ಕಾಮಗಾರಿಯನ್ನು ತೆಗೆದುಕೊಂಡಿದ್ದೇವೆ ಎಂಬ ಬಗ್ಗೆ ನಿಮ್ಮ ಮುಂದೆ ಸ್ಟೇಟ್‌ಮೆಂಟೇ ಕೊಟ್ಟಿದ್ದೇವೆ. ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೇವೆಂದು ಹೇಳುತ್ತಿದ್ದೇವೆ, ಪ್ರತಿ ತಿಂಗಳೂ ಕೂಡ ಏನು ಕಾಮಗಾರಿಯನ್ನು ಮಾಡುತ್ತಿದ್ದೇವೆ ಎಂಬುದನ್ನು ಹೇಳಿದ್ದೇವೆ, ಅವರು ಏನು ಪ್ರಶ್ನೆ ಕೇಳಿದರು, ಇದರಲ್ಲಿ ಏನು ಸ್ವಾಭಾವಿಕವಾಗಿ ಅವ್ಯವಹಾರವಾಗಿದೆ ಎಂಬುದಕ್ಕೆ ಸಮಿತಿಗಳು ಕೊಟ್ಟಂಥ ರಿಪೋರ್ಟ್‌ಗಳನ್ನು ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. ಹೀಗಾಗಿ ನಾನು ಬಹಳ ಸ್ಪಷ್ಟವಾಗಿ ರಾಜ್ಯದ ಜನರ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ, ಹಿಂದೆ ಅನೇಕ ವರ್ಷಗಳಿಂದ ನಿಂತಂಥ ಯೋಜನೆಗಳನ್ನು ಹಿಂದೆ ನಿಂತಿರಬಹುದು, ಈ ಯೋಜನೆಗಳನ್ನು ಈ ಸರ್ಕಾರ ಪೂರ್ಣಗೊಳಿಸುತ್ತದೆ, ಇದರಲ್ಲಿ ಯಾವುದೇ ಅನುಮಾನಬೇಡವೆಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಮುಳುವಾಡ್ ಲಿಫ್ಟ್ ಕೆನಾಲ್‌ನಲ್ಲಿ ಮೂರು ಸಾರಿ ನಿಮಗೆ ಪತ್ರವನ್ನು ಕೊಟ್ಟೆ, ಒಬ್ಬ ಕಂಟ್ರಾಕ್ಟರು ಮೂರು ಕೋಟಿ ರೂ ಕೆಲಸವನ್ನು ಏಳು ಕೋಟಿ ರೂ ಮಾಡಿ ಬಿಲ್ ಅನ್ನು ಎತ್ತಿದ್ದಾನೆ. ಇನ್ನೂ ಕೆಲಸ ಮುಗಿಸುತ್ತಿಲ್ಲವೆಂದು ನಾನು ಮೂರು ಸಾರಿ ಪತ್ರವನ್ನು ಕೊಟ್ಟೆ. ನಿಮಗೆ ನಿನ್ನೆಯೂ ಒಂದು ರಿಮೈಂಡ್ ಮಾಡಿದೆ, ಇದು ನಿಜವೇ ಇಲ್ಲವೋ ನೀವೇ ಒಪ್ಪಿಕೊಳ್ಳಿ. ಅಲ್ಲಿ 300 ಕೋಟಿ ರೂ ಆ ಪ್ರಾಜೆಕ್ಟ್‌ಗೆ ಖರ್ಚು ಮಾಡಿದ್ದೇವೆ. ಬರೀ ಏಳು ಕೋಟಿ ರೂ ಖರ್ಚು ಮಾಡದೆ ಮೂರು ವರ್ಷದಿಂದ ಯೋಜನೆ ಲಿಂಗರಿಂಗ್ ಆಗುತ್ತಿದೆ, ಅದು ಹಿಂದೆಯಾಗಲಿ ಮುಂದೆಯಾಗಲಿ. ನಾನು ನಿಮಗೆ ಹೇಳಿದ್ದೇನು? ನೀವು ಬಂದ ಮೇಲಾದರೂ ನಾಲ್ಕು ತಿಂಗಳಿನಿಂದ ಅಟ್‌ಲೀಸ್ಟ್ ನಿಮಗೆ ಪತ್ರ ಕೊಡುತ್ತಿದ್ದೇನೆ, ಮುಳುವಾಡ ವೆಸ್ಟ್‌ಕೆನಾಲ್‌ನಲ್ಲಿ 24. ಕಿ.ಮೀ.ನಲ್ಲಿ ಒಂದು aquaduct 300 ಕೋಟಿ ರೂ ಖರ್ಚು ಮಾಡಿ ಇವತ್ತಿನವರೆಗೆ ಆ ಕಾಂಟ್ರಾಕ್ಟರು ಕೆಲಸವನ್ನು ಮುಂದುವರೆಸದೆ ಇರುವುದರಿಂದ ನೀವು ಅವನ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ ಅವನನ್ನು ಬ್ಲಾಕ್ ಲೀಸ್ಟ್ ಮಾಡುತ್ತೀರಾ ಹೇಳಿಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಬಂದಾಗ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ಅವರನ್ನು ಕರೆಯಿಸುತ್ತೇನೆ, ಸಂಬಂಧಪಟ್ಟ

ಅಧಿಕಾರಿಗಳನ್ನು ಕರೆಯುಸುತ್ತೇನೆ, ಫೈಲ್ ತರಿಸುತ್ತೇನೆ, ಅದರಲ್ಲಿ ಯಾರು ತಪ್ಪಿತಸ್ಥರು ಇದ್ದರೆ ಸೂಕ್ತ ಕ್ರಮ ಖಂಡಿತ ತೆಗೆದುಕೊಳ್ಳುತ್ತೇನೆ ಬ್ಲಾಕ್ ಲೀಸ್ಟ್‌ನಲ್ಲೂ ಕೂಡ ಇಡುತ್ತೇನೆ, ಅದರಲ್ಲಿ ಹಿಂದುಮುಂದೆ ಇಲ್ಲ. ನಾನು ಏನು ಹೇಳುವುದಕ್ಕೆ ಹೊರಟೆ ಅಂದರೆ, ಏನು ಪ್ರಶ್ನೋತ್ತರ ಬಂದಿದೆ ಅದಕ್ಕೆ ಉತ್ತರ ಕೊಡುತ್ತಿದ್ದೇನೆ, ನೀವು ಇದ್ದಕ್ಕಿದ್ದಂತೆ ಯಾವುದೋ ಒಂದು ವಿಷಯವನ್ನು ಎತ್ತಿದ್ದರೆ, ಹೇಗೆ? ಅದು ಸಣ್ಣ ನೀರಾವರಿಗೆ ಬರುತ್ತಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಇಲ್ಲ ಮೇಜರ್ ಇರಿಗೇಷನ್‌ದ್ದು 21 ಟಿಎಂಸಿ ನೀರನ್ನು ಗೋದಾವರಿ ಟ್ರಿಬ್ಯುನಲ್‌ನಿಂದ ಡೈವರ್ಟ್ ಮಾಡಿ ಕರ್ನಾಟಕಕ್ಕೆ ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಅವರೆನು ಪ್ರಶ್ನೆ ಕೊಟ್ಟಿದ್ದರೋ ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಆ ಪ್ರಶ್ನೆಯನ್ನೇ ನೋಡಿ ಸರ್ (ಇ)ನಲ್ಲಿ ಗೋದಾವರಿ ಟ್ರಿಬ್ಯೂನಲ್‌ನಲ್ಲಿ ಕರ್ನಾಟಕ ರಾಜ್ಯಕ್ಕೇನು ನೀರು ಅಲೋಕೇಟ್ ಆಗಿದೆ, ಅದನ್ನು ಎಲ್ಲಿ ನೀವು ಉಪಯೋಗಿಸಿದ್ದೀರಿ ಎಂಬುದನ್ನು ಹೇಳಿ ಎಂದು ನಾನು ಕೇಳಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ತಾವು ಈ ಸಣ್ಣ ನೀರಾವರಿ ಬಗ್ಗೆ ಹೇಳಿದಿರಿ, ಹೊಸದಾಗಿ ಇರದಲ್ಲಿ ಯಾವ ಕೆರೆಯನ್ನೂ ಇಟ್ಟಿಲ್ಲ, 43ರಲ್ಲಿ ಒಂದೆರಡು ಮೂರಾದರೂ ಇಡಬೇಕಾಗಿತ್ತು. ಬೆಂಬ್ರಾ ಹೇಳಿದ್ದೀರಿ ಮೊದಲು ಇಟ್ಟಿದ್ದೀರಿ, ಅತನಾಪುರ್ ಮೊದಲೆ ಬಂದಿದೆ, ನಾಗಮಾರಪಲ್ಲಿ ಮೊದಲೇ ಬಂದಿದೆ, ಬಾಲೂರು ಮೊದಲೇ ಬಂದಿದೆ, ಈಗ ತಮ್ಮ ಸರ್ಕಾರ ಬಂದ ಮೇಲೆ ಒಂದೆರಡಾದರೂ ಕೆರೆಗಳಿಗೆ ಹಣ ಇಟ್ಟಿದ್ದೀರೆಂದು ಸರಿ, ಒಂದೂ ಇಟ್ಟಿಲ್ಲ. ಏಕೆಂದರೆ ಮೊದಲೇ ಆ ಪ್ರದೇಶದಲ್ಲಿ ನೀರಿಲ್ಲ, ಗೋದಾವರಿ ಬರುವುದೇ ಸಣ್ಣದು, 2.5 ಟಿಎಂಸಿ ನೀರು ಮಾತ್ರ ಔರಾದ್‌ಗೆ ಬರುತ್ತದೆ. ಬೇರೆ ಕಡೆಗೆ ಬರುವುದಿಲ್ಲ. ಇನ್ನು ಕಾರಂಜಾ ಪ್ರಾಜೆಕ್ಟ್‌ನಲ್ಲಿ ಮಾಂಜ್ರಾ ನದಿಯಲ್ಲಿ ನಮಗೆ 15 ಟಿಎಂಸಿ ಸಿಗುತ್ತದೆ, 9 ಕಾರಂಜಕ್ಕೆ ಹೋಗಿದೆ; 4 ಲಿಫ್ಟ್ ಇರಿಗೇಷನ್ ಮಾಡುತ್ತಿದ್ದೀರಿ, ಅದನ್ನು ಒಪ್ಪುತ್ತೇನೆ. ಇದರಲ್ಲಿ 2.5 ಟಿಎಂಸಿಯಲ್ಲಿ 1.758 ನೀರನ್ನು ಅನುದಾನ ಲಭ್ಯವಾದಾಗ ಮಾಡುತ್ತೇವೆಂದು, ನಿಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದೀರಿ ಇಲ್ಲವೆಂದು ನಾನು ಹೇಳುತ್ತಿಲ್ಲ, ಬಹಳ ಸರಿಯಾಗಿ ಉತ್ತರವನ್ನು ಕೊಟ್ಟಿದ್ದೀರಿ. 1.758 ನೀರನ್ನು ಯಾವಾಗ ಉಪಯೋಗ ಮಾಡುತ್ತೀರಿ? ಆ ಭಾಗದಲ್ಲಿ ಯಾವ ಕೆರೆಗಳೇ ಇಲ್ಲ, ಹೊಸದಾಗಿ ತಾವು ಕೆರೆಗಳನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಸದಸ್ಯರೂ ಕೂಡ ಮಂತ್ರಿಯಾಗಿದ್ದವರು, ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನಿಮಗೆ ಉತ್ತರ ಕೊಡಬೇಕೆಂದು ಸಣ್ಣ

ನೀರಾವರಿ ಇಲಾಖೆಯಿಂದ ಮಾಹಿತಿ ತರಿಸಿಕೊಂಡಿದ್ದೇನೆ, ಅವರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ, ಅವರ ಇಲಾಖೆಯಿಂದ ಖಂಡಿತ ಉತ್ತರವನ್ನು ಕೊಡುತ್ತಾರೆ, ನೀವು ಕೇಳಿದಕೋಸ್ಕರ ಸ್ವಲ್ಪ ತಡೆದು ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬಹಳ ಸಂತೋಷ, ಮೊದಲು ನಾನು ಕೇಳಿದ್ದೆ, ಎಷ್ಟು ಕೆರೆಗಳನ್ನು ತೆಗೆದುಕೊಳ್ಳುತ್ತೀರೆಂದು ಉತ್ತರ ಹೇಳಿದರೆ ಸಾಕು.

ಶ್ರೀ ಕೆ.ಎಸ್. ಈಶ್ವರಪ್ಪ: ಸಣ್ಣ ನೀರಾವರಿ ಇಲಾಖೆಗೆ ಪ್ರಶ್ನೆ ಕೇಳಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್: ಸಿಂಗಟಲೂರು ಏತ ನೀರಾವರಿ ಯೋಜನೆಯನ್ನು ನೋಡಿ ತಮಗೆ ಸಂಬಧವಿಲ್ಲವೆಂದು ತಪ್ಪು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನಾಗಮಾರಪಲ್ಲಿಯವರು ಹಿಂದೆ ಮಂತ್ರಿಯಾಗಿದ್ದರು, ಆದರೆ ಅವರು ಅರಣ್ಯಕ್ಕೆ ಮಂತ್ರಿಯಾಗಿದ್ದರು.

ಶ್ರೀ ಎಸ್.ಎಸ್. ಪಾಟೀಲ್: ನೀವು ದಯವಿಟ್ಟು ಸಿಂಗಟಾಲೂರು ನೋಡಿ. ಬಳ್ಳಾರಿ ಜಿಲ್ಲೆಗೆ ನೀರು ಹೋಗುತ್ತದೆ, ಹೇಳಿದ್ದೇನೂ ತಪ್ಪಲ್ಲ. ಹಳೆಯ ಯೋಜನೆಯದು ಹೇಳಿ ಬಿಡುತ್ತೀರಿ. ಮೂಲ ಅಂದಾಜು 63 ಕೋಟಿ ರೂಪಾಯಿ, 85 ಕೋಟಿ ರೂಪಾಯಿ ಖರ್ಚಾಗಿದೆ, 20 ಕೋಟಿ ರೂಪಾಯಿ ಹೆಚ್ಚಿಗೆ ಆಗಿದೆ ಎಂದು ಹೇಳುತ್ತೀರಿ. 600 ಕೋಟಿ ರೂಪಾಯಿ ಯೋಜನೆ ಮಾಡಿದ್ದೀರಿ, ಹಳೆಯ ಲೆಕ್ಕ ಕೊಡುತ್ತಿದ್ದೀರಿ. ಈ ರೀತಿ ನಿಮ್ಮ ಅಧಿಕಾರಿಗಳು ಎಲ್ಲೋ ಹೋಗಿ ತೆಗೆದುಕೊಂಡು ಬಂದು ಯಾವುದೋ ಉತ್ತರ ಕೊಟ್ಟು ಇಲ್ಲಿ ಸದನದಲ್ಲಿ ಹೇಳಿಸಿ ಬಿಟ್ಟರೆ ಏನು ಮಾಡುವುದು ಹೇಳಿ. ತಾವೇ ಬಂದಿದ್ದೀರಿ, ತಾವೇ ನೋಡಿದ್ದೀರಿ. ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ, ಮಾನ್ಯ ಮುಖ್ಯ ಮಂತ್ರಿಗಳು ಭೇಟಿ ಕೊಟ್ಟಿದ್ದಾರೆ.

ಅಧ್ಯಕ್ಷರು: ಯಾರು ಪ್ರಶ್ನೆಗಳನ್ನು ಕೇಳಿದ್ದಾರೆ ಅವರು ದಯಮಾಡಿ ಎರಡು ಉಪ ಪ್ರಶ್ನೆಗಳನ್ನು ಕೇಳಬಹುದು. ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ಅವರ ಪರವಾಗಿ ಅವರು ಈಲ್ಡ್ ಆಗಿದ್ದೇನೆಂದರೆ ಅವರಿಗೆ ಅವಕಾಶ ಕೊಡುತ್ತೇವೆ ಅಷ್ಟೆ. ಇನ್ನು ಮುಂದೆ ದಯಮಾಡಿ ಸಹಕರಿಸಬೇಕೆಂದು ಪ್ರಾರ್ಥನೆ.

ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ ಪ್ರಗತಿ

152 (792) ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಕಾಚೇನಹಳ್ಳಿ ಏತ ನೀರಾವರಿ ಯೋಜನೆ (ಹಂತ-2 ಮತ್ತು 3) ಯಾವ ಯಾವ ಹಂತಗಳಲ್ಲಿದೆ ಹಾಗೂ ಒದಗಿಸಿರುವ ಹಣ ಎಷ್ಟು ;

(ಆ) ಕಾಚೇನಹಳ್ಳಿ 2 ಮತ್ತು 3ನೇ ಹಂತದ ಸರ್ವೆ ಕೆಲಸ ಯಾವಾಗ ಪ್ರಾರಂಭವಾಯಿತು ಹಾಗೂ ಅದು ಈಗ ಯಾವ ಹಂತದಲ್ಲಿದೆ ;